**ಪಿ.ಡಬ್ಲ್ಯೂ-01**

**<u>ದಿನಾಂಕಃ 11.04.2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: ಶ್ರೀ ಆರ್.ಎಸ್.ಎಂ., 1 ರಿಂದ 6 ನೇ ಪ್ರತಿವಾದಿ ಪರ ವಕೀಲರಿಂದ</u>**

2. ನಾನು ಬಿ.ಎ. ಪದವೀಧರ. ನಾನು ಮನಮ್ಮೈನಹಟ್ಟಿ ಗ್ರಾಮದ ವಾಸಿ. ನಾನು ಮನಮ್ಮೈನಹಟ್ಟಿ ಗ್ರಾಮದಲ್ಲಿ ವಾಸವಾಗಿರುತ್ತೇನೆ ಅಂತ ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿತ್ತೀನಾ ಎಂದರೆ ಸಾಕ್ಷಿಯು ನನ್ನ ನ್ಯಾಯಬೆಲೆ ಅಂಗಡಿಯಲ್ಲಿಯೇ ವಾಸವಾಗಿದ್ದೇನೆ ಎಂದು ನುಡಿಯುತ್ತಾರೆ. ನಾನು ಮನಮ್ಮೈನಹಟ್ಟಿಯಲ್ಲಿ ವಾಸವಾಗಿರುವ ಕುರಿತು ಪಂಚಾಯಿತಿ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಚಳ್ಳಕೆರೆ ಮತ್ತು ನಾಯಕನಹಟ್ಟಿ ಮಧ್ಯೆ ಮನಮ್ಮೈನಹಟ್ಟಿ ಗ್ರಾಮ ಬರುತ್ತದೆ ಎಂದರೆ ಸರಿ. ಮನಮ್ಮೈನಹಟ್ಟಿ ಪ್ರಾರಂಭದಲ್ಲಿ ಸುಶೀಲಬಾಯಿ ಇವರ ಮನೆ ಬರುತ್ತದೆ ಎಂದರೆ ಸರಿಯಲ್ಲ. ಸುಶೀಲಬಾಯಿರವರ ಮನೆಯ ಪಕ್ಕದಲ್ಲಿ ಮಲ್ಲಿಕಾರ್ಜುನ ಇವರ ಮನೆ ಬರುತ್ತದೆ ಎಂದರೆ ಸರಿ. ಮಲ್ಲಿಕಾರ್ಜುನ ಮನೆಯ ಪಶ್ಚಿಮ ದಿಕ್ಕಿಗೆ ಓಣಿ ಬರುತ್ತದೆ ಎಂದರೆ ಸರಿ. ಸುಶೀಲಬಾಯಿ ಮನೆಯ ಪಶ್ಚಿಮ ದಿಕ್ಕಿಗೆ ಮಲ್ಲಿಕಾರ್ಜುನ ಇವರ ಮನೆ ಬರುತ್ತದೆ ಎಂದರೆ ಸರಿ. ಓಣಿಯ ಪಶ್ಚಿಮ ಭಾಗಕ್ಕೆ ಈಗ ಛಾಯ ಚಿತ್ರದಲ್ಲಿ ನೋಡುತ್ತಿರುವ ರಾಮಜೀನಾಯ್ಕನ ಮನೆ ಬರುತ್ತದೆ ಎಂದರೆ ಸರಿ. ಸಾಕ್ಷಿಯು ಛಾಯ ಚಿತ್ರವನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿ.ಡಿ.1 ಅಂತ ಗುರುತಿಸಲಾಯಿತು.

3. ರಾಮಜೀನಾಯ್ಕನ ಪಶ್ಚಿಮ ದಿಕ್ಕಿಗೆ ಈಗ ಛಾಯ ಚಿತ್ರದಲ್ಲಿ ನೋಡುತ್ತಿರುವ 4 ನೇ ಪ್ರತಿವಾದಿ ತಿಪ್ಪುಬಾಯಿ ಯಾನೆ ತಿಪ್ಪಮ್ಮನ ಮನೆ ಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಪುನಃ ಮುಂದುವರೆದು ಈ ಮೊದಲು ಅದು ನನ್ನ ಮನೆಯಾಗಿದ್ದು ಅದನ್ನು ಒಡೆದು ಈಗ 4 ನೇ ಪ್ರತಿವಾದಿ ತಿಪ್ಪುಬಾಯಿ ಯಾನೆ ತಿಪ್ಪಮ್ಮ ಮನೆ ಕಟ್ಟಿಕೊಂಡಿರುತ್ತಾಳೆ ಎಂದು ನುಡಿಯುತ್ತಾರೆ. ಸಾಕ್ಷಿಯು ಛಾಯ ಚಿತ್ರವನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿ.ಡಿ.2 ಅಂತ ಗುರುತಿಸಲಾಯಿತು. 4 ನೇ ಪ್ರತಿವಾದಿ ತಿಪ್ಪುಬಾಯಿ ಯಾನೆ ತಿಪ್ಪಮ್ಮನ ಮನೆಯ ಪಶ್ಚಿಮ ದಿಕ್ಕಿಗೆ ಓಣಿ ಬರುತ್ತದೆ ಎಂದರೆ ಸರಿ. ಓಣಿಯಾದ ನಂತರ ಪಶ್ಚಿಮ ದಿಕ್ಕಿಗೆ ಛಾಯಚಿತ್ರದಲ್ಲಿ ನೋಡುತ್ತಿರುವ ಸೋಮ್ಲಾನಾಯ್ಕನ ವಾಸದ ಮನೆ ಬರುತ್ತದೆ ಎಂದರೆ ಸರಿ. ಸಾಕ್ಷಿಯು ಛಾಯ ಚಿತ್ರವನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿ.ಡಿ.3 ಅಂತ ಗುರುತಿಸಲಾಯಿತು. ಸೋಮ್ಲಾನಾಯ್ಕನ ವಾಸದ ಮನೆಯಲ್ಲಿ ಹಾಲಿ ಯಾರು ಸಹ ವಾಸ ಇರುವುದಿಲ್ಲ ಎಂದರೆ ಸರಿ. ಸೋಮ್ಲಾನಾಯ್ಕನ ಪಶ್ಚಿಮ ದಿಕ್ಕಿಗೆ ಈಗ ಛಾಯ ಚಿತ್ರದಲ್ಲಿ ನೋಡುತ್ತಿರುವ ಮನೆಯು ವಿಜಯಲಕ್ಷ್ಮಿ ಗಂಡ ವಿಶ್ವನಾಥ ಇವರಿಗೆ ಸೇರಿದ ಮನೆ ಇರುತ್ತದೆ ಎಂದರೆ ಸಾಕ್ಷಿಯು ಇತ್ತೀಚೆಗೆ ಕಟ್ಟಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಯು ಛಾಯ ಚಿತ್ರವನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿ.ಡಿ.4 ಅಂತ ಗುರುತಿಸಲಾಯಿತು. ಹಳೇ ಮನೆ

ಬಿದ್ದು ಹೋಗಿದ್ದರಿಂದ ಈಗ ಹೊಸದಾಗಿ ಮನೆಯನ್ನು ಕಟ್ಟಲಾಗಿದೆ ಎಂದರೆ ಸಾಕ್ಷಿಯು ಮನೆಯನ್ನು ಬೀಳಿಸಿ ಕಟ್ಟಿಸಲಾಗಿದೆ ಎಂದು ನುಡಿಯುತ್ತಾರೆ.

ಹಳೇ ಮನೆ ವಾಸಕ್ಕೆ ಯೋಗ್ಯ ಇಲ್ಲದಿರುವ ಕಾರಣಕ್ಕೆ ಅದನ್ನು ಬೀಳಿಸಿ ಹೊಸದಾಗಿ ಕಟ್ಟಲಾಗಿದೆ ಎಂದರೆ ಸಾಕ್ಷಿಯು ವಾಸಕ್ಕೆ ಯೋಗ್ಯವಿದ್ದು, ಆದರೆ ಲೋನ್ ತೆಗೆದುಕೊಂಡು ಮನೆ ಬೀಳಿಸಿ ಹೊಸದಾಗಿ ಮನೆಯನ್ನು ಕಟ್ಟಿಸಲಾಗಿದೆ ಎಂದು ನುಡಿಯುತ್ತಾರೆ.

4. 4 ನೇ ಪ್ರತಿವಾದಿ ತಿಪ್ಪುಬಾಯಿ ಯಾನೆ ತಿಪ್ಪಮ್ಮ ಕೂಡ ಪಂಚಾಯಿತಿಯಿಂದ ಲೋನ್ ತೆಗೆದುಕೊಂಡು ಮನೆಕಟ್ಟಿಸಿಕೊಂಡಿರುತ್ತಾಳೆ ಎಂದರೆ ಸರಿ. 4 ನೇ ಪ್ರತಿವಾದಿ ತಿಪ್ಪುಬಾಯಿ ಯಾನೆ ತಿಪ್ಪಮ್ಮ ಗಂಡನ ಹೆಸರು ಯುವರಾಜನಾಯ್ಕ ಎಂದರೆ ಸರಿ. 5 ನೇ ಪ್ರತಿವಾದಿ ಚಂದ್ರಶೇಖರನಾಯ್ಕ 4 ನೇ ಪ್ರತಿವಾದಿ ತಿಪ್ಪುಬಾಯಿ ಯಾನೆ ತಿಪ್ಪಮ್ಮನ ಮಗ ಎಂದರೆ ಸರಿ. 4 ನೇ ಪ್ರತಿವಾದಿ ತಿಪ್ಪುಬಾಯಿ ಯಾನೆ ತಿಪ್ಪಮ್ಮ ಕಟ್ಟಿಸಿಕೊಂಡಿರುವ ನಿ.ಡಿ.2 ರ ಮನೆ ಈ ಮುಂಚೆ ಯುವರಾಜನಾಯ್ಕನ ಹೆಸರಿನಲ್ಲಿ ಖಾತೆ ಇತ್ತು ಎಂದರೆ ಸರಿ. ಯುವರಾಜನಾಯ್ಕ ತೀರಿಕೊಂಡಾಗ ನಂತರ 4 ನೇ ಪ್ರತಿವಾದಿ ತಿಪ್ಪುಬಾಯಿ ಯಾನೆ ತಿಪ್ಪಮ್ಮನ ಹೆಸರಿಗೆ ಪಂಚಾಯಿತಿಯಲ್ಲಿ ಪೌತಿ ಖಾತೆ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ನನ್ನ ಮನೆಯನ್ನು ಬೀಳಿಸಿ ಪಂಚಾಯಿತಿಯಲ್ಲಿ ಹೊಸ ಖಾತೆಯನ್ನು ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

5. ವಿಜಯಲಕ್ಷ್ಮಿ ಗಂಡ ವಿಶ್ವನಾಥ ಇವರ ಮನೆಯ ಪಶ್ಚಿಮ ದಿಕ್ಕಿಗೆ ಓಣಿ ಬರುತ್ತದೆ ಎಂದರೆ ಸರಿ. ವಿಜಯಲಕ್ಷ್ಮಿ ಗಂಡ ವಿಶ್ವನಾಥ ಇವರು 1 ನೇ ಪ್ರತಿವಾದಿ ರಾಮಜೀನಾಯ್ಕನ ಸೊಸೆ ಎಂದರೆ ಸರಿ. ಓಣಿಯ ಪಶ್ಚಿಮಕ್ಕೆ ದೂನನಾಯ್ಕನ ಮನೆ ಬರುತ್ತದೆ ಎಂದರೆ ಸರಿ. ನಾಯಕನಹಟ್ಟಿ ಮುಖ್ಯ ರಸ್ತೆಯಿಂದ ಬಂದಾಗ ಪಶ್ಚಿಮ ದಿಕ್ಕಿಗೆ ಸುಶೀಲಬಾಯಿ, ಮಲ್ಲಿಕಾರ್ಜುನ, ರಾಮಜೀನಾಯ್ಕ, ತಿಪ್ಪಮ್ಮ ಗಂಡ ಯುವರಾಜನಾಯ್ಕ, ಸೋಮ್ಲಾನಾಯ್ಕ ಇವರ ಪಾಳುಬಿದ್ದ ಮನೆ, ವಿಜಯಲಕ್ಷ್ಮಿ ಗಂಡ ವಿಶ್ವನಾಥ ಮತ್ತು ದೂನನಾಯ್ಕ ಇವರ ಮನೆಗಳು ಪೂರ್ವ-ಪಶ್ಚಿಮವಾಗಿ ಒಂದೇ ಸಾಲಿನಲ್ಲಿ ಇರುತ್ತವೆ ಎಂದರೆ ಸರಿ. ಮೇಲಿನ ಎಲ್ಲ ಮನೆಗಳಿಗೆ ಉತ್ತರ ದಿಕ್ಕಿಗೆ ದಾರಿ ಇರುತ್ತದೆ ಎಂದರೆ ಸರಿ.

**(1 ರಿಂದ 6 ನೇ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.